Ex-03/2023
RW-1

<u>ಸಾಕ್ಷಿಯನ್ನು ದಿನಾಂಕಃ **02-08-2025** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>

<u>ಪಾಟೀಸವಾಲುಃ ಶ್ರೀ. ಎ.ಕೆ.ಅರ್ ವಕೀಲರವರಿಂದಃ</u>

1. ದಾವಾ ಸಂಖೆ 15/2017 ಇದನ್ನು ಡಿಕ್ರಿದಾರರು ನನ್ನ ವಿರುದ್ಧ ಹಾಕಿದ್ದು ಅದರಲ್ಲಿ ನನ್ನ ವಿರುದ್ಧ ಆದೇಶವಾಗಿರುತ್ತದೆ ಅಂದರೆ ನನಗೆ ಯಾವ ವಿಚಾರವೂ ಗೊತ್ತಿರುವುದಿಲ್ಲ. ಆ ಕೇಸಿನ ಸಮನ್ಸ ನನಗೆ ಬಂದಾಗ ನಾನು ತಿರಸ್ಕರಿಸಿದ್ದೇನೆ ಅಂದರೆ ಸರಿಯಲ್ಲ. ಸದರಿ ಕೇಸು ವಾದಿಯರ ಪರವಾಗಿ ಡಿಕ್ರಿ ಆಗಿರುವ ವಿಚಾರ ನನಗೆ ಗೊತ್ತಿರುತ್ತದೆ ಅಂದರೆ ಸರಿಯಲ್ಲ. ನನಗೆ ಗೊತ್ತಿಲ್ಲದೇ ಸದರಿ ದಾವೆಯು ಏಪತರ್ಫಿ ತೀರ್ಪು ಆಗಿರುವುದು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಡಿಕ್ರಿ ಆದ ವಿಚಾರ ನನಗೆ ಯಾವ ದಿನಾಂಕದಂದು ಗೊತ್ತಾಯಿತು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ದಾವೆಯಲ್ಲಿ ಡಿಕ್ರಿ ಆದ ವಿಚಾರ ನನಗೆ ನನ್ನ ಯಜಮಾನರು ಹೇಳಿದ ಕಾರಣ ಗೊತ್ತಾಗಿರುತ್ತದೆ. ನನ್ನ ವಿರುದ್ಧ ಡಿಕ್ರಿ ಆಗಿದ್ದರೂ ಕೂಡ ನಾನು ವಿನಾಕರಣ ವಾದಿ ಡಿಕ್ರಿದಾರರಿಗೆ ತೊಂದರೆ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

2. ನಾನು ಉದ್ದೇಶಪೂರ್ಕವಾಗಿ ನ್ಯಾಯಾಲಯದ ಆದೇಶವನ್ನು ಉಲ್ಲಂಘನ ಮಾಡುತ್ತಿದ್ದೇನೆ ಅಂದರೆ ನನಗೆ ಗೂತ್ತಿಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

02-08-2025

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ

ಸಾಕ್ಷಿಯ ಸಹಿ